ಚಾಮುಂಡೇಶ್ವರಿ ವಿದ್ಯುತ್ ಸರಬರಾಜು
ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಚಾವಿಸನಿನಿ, ಕಾರ್ಯ ಮತ್ತು ಪಾಲನಾ
ಉಪವಿಭಾಗ ಬೆಳ್ಳೂರು-571418
ದೂರವಾಣಿ: 9449598641

CHAMUNDESHWARI ELECTRICITY
SUPPLYCORPORATION LIMITED
(A Governnment of KarnatakaUndertaking)
Assistant Executive Engineer(Ele)
CESC, O & M Subdivision, Bellur
Web Site: www.cescmysore.org.
E-mail ID: aeebellursubdivision@gmail.com

Company Identity Number[CIN]:-U40109KA2004SGC035177

ಕ್ರಮ ಸಂಖ್ಯೆ, ಸ.ಕಾ.ನಿ.ಇಂ.(ವಿ)/ಸ.ಇಂ(ತಾ)/ಬೆಳ್ಳೂರು/21-22/ 936 ದಿನಾಂಕ: 31-12-2021

## ಜನಸಂಪರ್ಕ ಸಭೆಯ ನಡಾವಳಿಗಳು

ದಿನಾಂಕ:29/12/2021 ರಂದು ಬುಧವಾರ ಬೆಳಿಗ್ಗೆ 11:00 ಗಂಟೆಗೆ ನಾಗಮಂಗಲ ತಾಲ್ಲೂಕಿನ ಬೆಳ್ಳೂರು ಉಪ ವಿಭಾಗದ ಕಛೇರಿ ಆವರಣದಲ್ಲಿ ನಡೆದ ಜನಸಂಪರ್ಕ ಸಭೆಯ ನಡಾವಳಿಗಳು.

ಹಾಜರಿದ್ದ ಅಧಿಕಾರಿಗಳು / ನೌಕರರು.

ಶ್ರೀ/ಶ್ರೀಮತಿ/ಕುಮಾರಿ:

1) ರವಿಕುಮಾರ್.ಕೆ :ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ಕ) ನಾಗಮಂಗಲ ವಿಭಾಗ
2) ನಾಗರಾಜು : ಲೆಕ್ಕಾಧಿಕಾರಿ, ನಾಗಮಂಗಲ ವಿಭಾಗೀಯ ಕಛೇರಿ
3) ಶ್ರೀಧರ್.ಬಿ.ಎಸ್ : ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಬೆಳ್ಳೂರು ಉಪವಿಭಾಗ
4) ಹೇಮ.ಆರ್ : ಸಹಾಯಕ ಇಂಜಿನಿಯರ್(ತಾಂ), ಬೆಳ್ಳೂರು ಉಪವಿಭಾಗ
5) ರಾಮಚಂದ್ರೇಗೌಡ : ಪ್ರಭಾರ ಹಿರಿಯ ಸಹಾಯಕರು,ಬೆಳ್ಳೂರು ಉಪವಿಭಾಗ
6) ವೇಣುಗೋಪಾಲ್.ಎಂ.ಎನ್ :ಪ್ರಭಾರ ಸಹಾಯಕ ಇಂಜಿನಿಯರ್(ವಿ)
7) ನವಿನ್ ಕುಮಾರ್ : ಶಾಖಾಧಿಕಾರಿ, ಕದಬಹಳ್ಳಿ ಶಾಖೆ
8) ದಿಲೀಪ್.ಎಸ್.ಜೆ : ಶಾಖಾಧಿಕಾರಿ,ಬಿಂಡಿಗನವಿಲೆ ಶಾಖೆ

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ ಮತ್ತು ಪಾ ಉಪವಿಭಾಗ ಬೆಳ್ಳೂರು ರವರು ಸಭೆಗೆ ಹಾಜರಿದ್ದ ಎಲ್ಲಾ ಅಧಿಕಾರಿ/ ನೌಕರರನ್ನು ಹಾಗೂ ವಿದ್ಯುತ್ ಗ್ರಾಹಕರನ್ನು ಸ್ವಾಗತಿಸಿದರು.

ವಿದ್ಯುತ್ ಗ್ರಾಹಕರ ಕುಂದು ಕೊರತೆಗಳನ್ನು ಆಲಿಸಿ ಬಗೆಹರಿಸುವ ನಿಟ್ಟಿನಲ್ಲಿ ಪ್ರತಿ ಮೂರು ತಿಂಗಳಿಗೊಮ್ಮೆ ಜನ ಸಂಪರ್ಕ ಸಭೆಯನ್ನು ನಡೆಸುವಂತೆ ಕೆ.ಇ.ಆರ್.ಸಿ ರವರಿಂದ ಆದೇಶವಾಗಿರುತ್ತದೆ. ವಿದ್ಯುತ್ ದರವನ್ನು ಪರಿಷ್ಕರಿಸುವ ಸಂದರ್ಭದಲ್ಲಿ ವಿದ್ಯುತ್ ಬಳಕೆದಾರರ ಒಪ್ಪಿಗೆಯ ಅವಶ್ಯಕತೆ ಇರುತ್ತದೆ. ಶಾಖಾಧಿಕಾರಿಗಳು ವಿದ್ಯುತ್ ಬಳಕೆದಾರರ ಸಮಸ್ಯೆಗಳಿಗೆ ಸ್ಪಂದಿಸುವ ಕುರಿತು ಹಾಗೂ ಗ್ರಾಹಕರಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವ ಬಗ್ಗೆ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಸೆಸ್ಕ್ ಕಾರ್ಯ ಮತ್ತು ಪಾಲನಾ ವಿಭಾಗೀಯ ಕಛೇರಿ ನಾಗಮಂಗಲ, ರವರು ವಿದ್ಯುತ್ ಸಂಬಂಧಿತ ದೂರುಗಳನ್ನು ಮೌಖಿಕವಾಗಿ / ಲಿಖಿತವಾಗಿ ಸಲ್ಲಿಸುವಂತೆ ವಿದ್ಯುತ್ ಗ್ರಾಹಕರಲ್ಲಿ / ಸಾರ್ವಜನಿಕರಲ್ಲಿ ಕೇಳಲಾಯಿತು.

ಈ ಹಿಂದಿನ ಸಭೆಯಲ್ಲಿ ನೀಡಲಾದ ದೂರುಗಳನ್ನು ಹಾಗೂ ಅದರ ಬಗ್ಗೆ ತೆಗೆದುಕೊಂಡ ಕ್ರಮಗಳನ್ನು ಮೊದಲು ಪರಿಶೀಲಿಸಲಾಯಿತು.

**1)ಶ್ರೀ.ಶಂಕರ್‌ಲಿಂಗೇಗೌಡ ಅಳೀಸಂದ್ರ ಮೊಬೈಲ್ ನಂ:-9844543597**

ದೂರು:- 1).ಶ್ರೀ.ಶಂಕರ್‌ಲಿಂಗೇಗೌಡ ಅಳೀಸಂದ್ರ ರವರು ಅಕ್ರಮ-ಸಕ್ರಮ ಯೋಜನೆಯಡಿಯಲ್ಲಿ ಕೊಳವೆ ಬಾವಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ದಿನಾಂಕ 17.07.2021ರಂದು ಸೆಸ್ಕ್ ಬೆಳ್ಳೂರು ಉಪವಿಭಾಗದಲ್ಲಿ ಹಣ ಪಾವತಿಸಿದ್ದು ಸದರಿಯವರ ಕೊಳವೆ ಬಾವಿಗೆ ಹೊಸ ಪರಿವರ್ತಕವನ್ನು ಅಳವಡಿಸಲು ಕೋರಿರುತ್ತಾರೆ.

ಕ್ರಮ:- ನಿಗಮದ ನಿಯಮಾನುಸಾರ ಕದಬಹಳ್ಳಿ ಶಾಖಾಧಿಕಾರಿಗಳಿಗೆ ಸ್ಥಳ ಪರಿಶೀಲನೆ ಮಾಡಿ ಅಂದಾಜು ಪಟ್ಟಿಯನ್ನು ತಯಾರು ಮಾಡಿ ವಿಭಾಗೀಯ ಕಛೇರಿಗೆ ಸಲ್ಲಿಸಲು ಸೂಕ್ತ ಕ್ರಮ ಕೈಗೊಳ್ಳಲು ತಿಳಿಸಿರುತ್ತಾರೆ.

**2)ಶ್ರೀಮತಿ.ಹೆಚ್.ಎನ್.ಸುಧ ದೊಡ್ಡಾಘಟ್ಟ ಮೊಬೈಲ್ ನಂ:-9164511920**

ದೂರು:- ಶ್ರೀಮತಿ.ಹೆಚ್.ಎನ್.ಸುಧ ದೊಡ್ಡಾಘಟ್ಟ ರವರ ಗೃಹ ಬಳಕೆಯ ಸ್ಥಾವರದ ಸಂಖ್ಯೆ ಡಿಜಿಎಲ್-135 ಆಗಿದ್ದು ಸ್ಥಾವರದ ಮಾಪಕವನ್ನು ಕಂದಾಯ ಬಾಕಿಗಾಗಿ ಬಿಚಿದ್ದು, ಸದರಿ ಸ್ಥಾವರದ ಬಾಕಿ ಇದ್ದ ಕಂದಾಯವನ್ನು ಪಾವತಿಸಿದ್ದು, ಮಾಪಕವನ್ನು ಮರುಜೋಡಣೆ ಮಾಡಿಕೊಡಲು ಈ ಮೂಲಕ ಕೋರಿರುತ್ತಾರೆ.

ಕ್ರಮ:- ಸದರಿ ಗ್ರಾಹಕರು ಪಾವತಿಸಿರುವ ಬಿಲ್ಲ್‌ಗಳನ್ನು ಪರೀಕ್ಷೀಸಿ, ರೀಕನೆಕ್ಷನ್ ಮೆಮೋ ನೀಡಲು ಹಿರಿಯ ಸಹಾಯಕರಿಗೆ ಸೂಚಿಸಿದ್ದು, ಸದರಿ ಮಾಪಕವನ್ನು ಅಳವಡಿಸಿ ವಿದ್ಯುತ್ ಸಂಪರ್ಕ ಕಲ್ಪಿಸಲು ಶಾಖಾಧಿಕಾರಿಗಳಿಗೆ ಸೂಚಿಸಲಾಗಿದೆ.

ದೂರನ್ನು ನೀಡಿದ ಗ್ರಾಹಕರ ಸಂಖ್ಯೆ :- 02
ಒಟ್ಟು ದೂರು/ಸಮಸ್ಯೆಗಳು :- 02
ಒಟ್ಟು ಹಾಜರಿದ್ದ ಗ್ರಾಹಕರ ಸಂಖ್ಯೆ:-2

ಮೇಲ್ಕಂಡ ದೂರುಗಳಿಗೆ ತೆಗೆದುಕೊಂಡ ಕ್ರಮಗಳ ಬಗ್ಗೆ ಅನುಪಾಲನಾ ವರದಿಯನ್ನು ಮುಂದಿನ ಜನಸಂಪರ್ಕ ಸಭೆಯಲ್ಲಿ ಹಾಜರುಪಡಿಸುವಂತೆ ಉಪವಿಭಾಗಾಧಿಕಾರಿಗಳಿಗೆ ಸೂಚಿಸಲಾಯಿತು.

ಲೆಕ್ಕಾಧಿಕಾರಿಗಳು ನಾಗಮಂಗಲ ವಿಭಾಗರವರು ಸಭೆಯಲ್ಲಿ ಭಾಗವಹಿಸಿದ್ದ ಎಲ್ಲಾ ಅಧಿಕಾರಿಗಳು/ನೌಕರರು ಹಾಗೂ ಗ್ರಾಹಕರುಗಳಿಗೆ ವಂದನಾರ್ಪಣೆ ಸಲ್ಲಿಸಿದ ನಂತರ ಸಭೆಯನ್ನು ಮಧ್ಯಾಹ್ನ 01:30 ಗಂಟೆಗೆ ಮುಕ್ತಾಯಗೊಳಿಸಲಾಯಿತು.

31/12/21

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ),
ಚಾ.ವಿ.ಸ.ನಿ.ನಿ, ಕಾ ಮತ್ತು ಪಾ ಉಪವಿಭಾಗ
ಬೆಳ್ಳೂರು.

ಪ್ರತಿಗಳನ್ನು
1.ಕಛೇರಿ ಪ್ರತಿ.